# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
## Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.14-2020-21 (ಭಾ) ದಿನಾಂಕ:27-09-2021

### 2021ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶ – ದಾಖಲಾತಿ ಪರಿಶೀಲನಾ ವೇಳಾಪಟ್ಟಿ – ಅಧಿಸೂಚನೆ

ಸಿಇಟಿ-2021 ರ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಮೂಲ ದಾಖಲಾತಿಗಳ ಪರಿಶೀಲನೆಯನ್ನು "ಸೌಲಭ್ಯ ಕೇಂದ್ರ / ಸಹಾಯಕ ಕೇಂದ್ರಗಳಲ್ಲಿ" ದಿನಾಂಕ 30-09-2021 ರಿಂದ ಈ ಕೆಳಗಿನ ವೇಳಾಪಟ್ಟಿಯಂತೆ ಪ್ರಾರಂಭಿಸಲಾಗುವುದು. ಅಭ್ಯರ್ಥಿಗಳು ಹತ್ತಿರದ ಸೌಲಭ್ಯ ಕೇಂದ್ರಗಳಲ್ಲಿ ದಾಖಲಾತಿ ಪರಿಶೀಲನೆಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಈ ಸೌಲಭ್ಯ ಕೇಂದ್ರಗಳಲ್ಲಿ Online Verification Software ಮೂಲಕ ದಾಖಲಾತಿಗಳನ್ನು ಪರಿಶೀಲಿಸಲಾಗುವುದು. ಸೌಲಭ್ಯ ಕೆಂದ್ರಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

### ಸೌಲಭ್ಯ ಕೇಂದ್ರಗಳಲ್ಲಿ ಮೂಲ ದಾಖಲಾತಿಗಳ ಪರಿಶೀಲನಾ ವೇಳಾಪಟ್ಟಿ (ಇಂಜಿನಿಯರಿಂಗ್ ರ್‍ಯಾಂಕ್ ಆಧಾರದ ಮೇಲೆ)

| DATE | Forenoon Session-1 9.15 a.m. – 11.00 a.m. Reporting Time: 8.45 a.m. | | Forenoon Session-2 11.15 a.m. – 1.15 p.m. Reporting Time: 10.45 a.m. | | Afternoon Session-1 2.00 pm – 4.00 pm Reporting Time: 1.30 p.m. | | Afternoon Session-2 4.15 pm – 6.15 pm Reporting Time: 3.15 p.m. | |
|---|---|---|---|---|---|---|---|---|
| | Engineering Rank Numbers | | Engineering Rank Numbers | | Engineering Rank Numbers | | Engineering Rank Numbers | |
| | **From** | **To** | **From** | **To** | **From** | **To** | **From** | **To** |
| 30-09-2021 | 1 | 250 | 251 | 500 | 501 | 750 | 751 | 1000 |
| 01-10-2021 | 1001 | 1250 | 1251 | 1500 | 1501 | 1750 | 1751 | 2000 |
| 04-10-2021 | 2001 | 2750 | 2751 | 3500 | 3501 | 4500 | 4501 | 5000 |
| 05-10-2021 | 5001 | 5750 | 5751 | 6500 | 6501 | 7250 | 7251 | 8000 |
| 07-10-2021 | 8001 | 9000 | 9001 | 10000 | 10001 | 11000 | 11001 | 12000 |
| 08-10-2021 | 12001 | 13500 | 13501 | 15000 | 15001 | 16500 | 16501 | 17500 |
| 09-10-2021 | 17501 | 19000 | 19001 | 20500 | 20501 | 22000 | 22001 | 23000 |
| 11-10-2021 | 23001 | 25000 | 25001 | 27000 | 27001 | 29000 | 29001 | 31000 |
| 12-10-2021 | 31001 | 33000 | 33001 | 35000 | 35001 | 37000 | 37001 | 39000 |
| 13-10-2021 | 39001 | 42000 | 42001 | 45000 | 45001 | 48000 | 48001 | 49000 |
| 16-10-2021 | 49001 | 52000 | 52001 | 55000 | 55001 | 58000 | 58001 | 60000 |
| 18-10-2021 | 60001 | 63000 | 63001 | 66000 | 66001 | 69000 | 69001 | 71000 |
| 19-10-2021 | 71001 | 74000 | 74001 | 77000 | 77001 | 80000 | 80001 | 82000 |
| 20-10-2021 | 82001 | 85000 | 85001 | 88000 | 88001 | 91000 | 91001 | 93000 |
| 21-10-2021 | 93001 | 98000 | 98001 | 103000 | 103001 | 108000 | 108001 | 112000 |
| 22-10-2021 | 112001 | 116000 | 116001 | 120000 | 120001 | 122000 | 122001 | 123000 |
| 23-10-2021 | 123001 | 127000 | 127001 | 131000 | 131001 | 133000 | 133001 | 135000 |
| 25-10-2021 | 135001 | 140000 | 140001 | 145000 | 145001 | 148000 | 148001 | 150000 |
| 26-10-2021 | 150001 | 155000 | 155001 | 160000 | 160001 | 163000 | 163001 | 165000 |
| 27-10-2021 | 165001 | 170000 | 170001 | 175000 | 175001 | 178000 | 178001 | 180000 |
| 28-10-2021 | 180001 | 182000 | 182001 | Last Rank | | | | |

### ಸೂಚನೆಗಳು

1. ಅಭ್ಯರ್ಥಿಗಳು 2021 ರ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದುಕೊಂಡಿರುವ ಇಂಜಿನಿಯರಿಂಗ್ ರ್‍ಯಾಂಕ್ ಆಧಾರದ ಮೇಲೆ ಮೂಲ ದಾಖಲಾತಿಗಳ ಪರಿಶೀಲನೆಗೆ ನಿಗದಿಪಡಿಸಿರುವ ವೇಳಾಪಟ್ಟಿಗೆ ಅನುಸಾರವಾಗಿ ಹತ್ತಿರದ ಸೌಲಭ್ಯ / ಸಹಾಯಕ ಕೇಂದ್ರಕ್ಕೆ ಹಾಜರಾಗಬೇಕು.



**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

2. ಇಂಜಿನಿಯರಿಂಗ್ ರ್‍ಯಾಂಕ್ ಆಧಾರದ ಮೇಲೆ ನಿಗದಿತ ವೇಳಾಪಟ್ಟಿಯ ಅನುಸಾರ ಕೇವಲ 15 ನಿಮಿಷ ಮೊದಲು ಸೌಲಭ್ಯ ಕೇಂದ್ರವನ್ನು ಪ್ರವೇಶಿಸಲು ಅನುವು ಮಾಡಿಕೊಡುವುದರಿಂದ, ಅಭ್ಯರ್ಥಿಗಳು ನಿಗದಿತ ಸಮಯಕ್ಕೆ ಮುಂಚಿತವಾಗಿ ಸೌಲಭ್ಯ ಕೇಂದ್ರಕ್ಕೆ ಬರುವ ಅವಶ್ಯಕತೆ ಇರುವುದಿಲ್ಲ.
3. ಒಂದು ವೇಳೆ ಇಂಜಿನಿಯರಿಂಗ್ ರ್‍ಯಾಂಕ್ ಪಡೆಯಲು ಅರ್ಹತೆ ಇಲ್ಲದಿರುವ ಹಾಗು ಇತರೆ ಕೋರ್ಸುಗಳಿಗೆ ರ್‍ಯಾಂಕ್ ಪಡೆದಿರುವವರು ಮಾತ್ರ, ಅಂತಹ ರ್‍ಯಾಂಕ್ ಆಧಾರದ ಮೇಲೆ ಮೇಲಿನ ವೇಳಾಪಟ್ಟಿಯಂತೆ ಹಾಜರಾಗಬಹುದು.
4. ದಾಖಲೆಗಳ ಪರಿಶೀಲನೆಯನ್ನು, ಅಭ್ಯರ್ಥಿಯು ತಾನು ಅರ್ಹವಿರುವ ಎಲ್ಲಾ ಕೋರ್ಸುಗಳಿಗೆ ಸಂಬಂಧಿಸಿದಂತೆ, ಇಂಜಿನಿಯರಿಂಗ್, ಕೃಷಿ ವಿಜ್ಞಾನ, ನ್ಯಾಚುರೋಪತಿ ಮತ್ತು ಯೋಗ, ಬಿ–ಫಾರ್ಮ ಮತ್ತು ಫಾರ್ಮಾ–ಡಿ, 2ನೇ ವರ್ಷದ ಬಿ–ಫಾರ್ಮ ಕೋರ್ಸುಗಳಿಗೆ ಒಂದೇ ಸಲ ದಾಖಲೆಗಳ ಪರಿಶೀಲನೆಯನ್ನು ಮಾಡಲಾಗುವುದು. ಆದ್ದರಿಂದ ಇತರೆ ಕೋರ್ಸುಗಳ ರ್‍ಯಾಂಕುಗಳ ಪ್ರವೇಶಾತಿಗೆ ದಾಖಲೆಗಳ ಪರಿಶೀಲನೆಗಾಗಿ ಮತ್ತೊಮ್ಮೆ ಹಾಜರಾಗಬೇಕಾದ ಅವಶ್ಯಕತೆ ಇರುವುದಿಲ್ಲ.
5. ವೈದ್ಯಕೀಯ / ದಂತವೈದ್ಯಕೀಯ / ಆಯುಷ್ ಕೋರ್ಸುಗಳಿಗೂ ಸಹ ಪರಿಶೀಲನೆಯು ಅನ್ವಯವಾಗುತ್ತದೆ, ಆದರೆ ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳಿಗೆ ಅನ್ವಯಿಸುವ ಧಾರ್ಮಿಕ ಅಲ್ಪಸಂಖ್ಯಾತ, ಭಾಷಾ ಅಲ್ಪಸಂಖ್ಯಾತ, ಹಾಗೂ ಎನ್.ಆರ್.ಐ. ವಾರ್ಡ್ ಮೀಸಲಾತಿ, ಹಾಗು ಸೇಂಟ್ ಜಾನ್ ವೈದ್ಯಕೀಯ ಕಾಲೇಜಿನ ಮೀಸಲಾತಿಗೆ ಸಂಬಂಧಿಸಿದಂತೆ, ಮೀಸಲಾತಿ ಕೋರುವ ಅರ್ಹ ಅಭ್ಯರ್ಥಿಗಳು ಮಾತ್ರ ಮತ್ತೊಮ್ಮೆ ಹಾಜರಾಗಬೇಕು. ಯುಜಿನೀಟ್ – 2021 ರ ಫಲಿತಾಂಶ ಬಂದ ನಂತರ ವೇಳಾಪಟ್ಟಿ ನೀಡಲಾಗುವುದು.
6. ದಾಖಲೆಗಳ ಪರಿಶೀಲನೆಗಾಗಿ ಸಹಾಯಕ ಕೇಂದ್ರಕ್ಕೆ ಬರುವ ಸಮಯದಲ್ಲಿ ಕಡ್ಡಾಯವಾಗಿ, ಎಲ್ಲಾ ಮೂಲ ದಾಖಲೆಗಳನ್ನು ಮತ್ತು ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಬೇಕು.
7. ದಾಖಲೆಗಳ ಪರಿಶೀಲನೆಯ ನಂತರ ಅರ್ಹಗೊಳ್ಳುವ ಅಭ್ಯರ್ಥಿಗಳನ್ನು ಮಾತ್ರ, ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹತೆ ಪಡೆಯುವುದಕ್ಕಾಗಿ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು.
8. ಅಭ್ಯರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಈ ಕೆಳಗೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.
9. ಕ.ಪ.ಪ್ರಾ.ವು, ದಾಖಲೆಗಳ ಪರಿಶೀಲನೆ ಮುಗಿದ ನಂತರ, ಆ ಪ್ರತಿಯೊಂದು ದಿನದ ಕೊನೆಯಲ್ಲಿ ತನ್ನ ವೆಬ್‌ಸೈಟ್ http://kea.kar.nic.in ನಲ್ಲಿ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಪ್ರಕಟಿಸುತ್ತದೆ.
10. ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳು ಮತ್ತು ಪೋಷಕರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಹಾಜರಾಗಬೇಕು ಮತ್ತು ಸ್ಯಾನಿಟೈಸರ್, ಕುಡಿಯುವ ನೀರಿನ ಬಾಟಲ್‌ಗಳನ್ನು ತರುವುದು ಉತ್ತಮ.
11. ಪರಿಶೀಲನಾ ಸಮಯದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಆಹಾರ ಮತ್ತು ಔಷಧಿ ಗಳನ್ನು ಅಗತ್ಯವಿದ್ದಲ್ಲಿ ಪರಿಶೀಲನಾ ಕೇಂದ್ರಕ್ಕೆ ಅಭ್ಯರ್ಥಿಗಳು ಒಯ್ಯಬಹುದು.
12. ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ, ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಮೀಸಲಾತಿ / ಯಾವುದೇ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ತರಬೇಕು.

ಸಹಿ/–

ಕಾರ್ಯನಿರ್ವಾಹಕ ನಿರ್ದೇಶಕರು.